# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 94(32)

**ಸದಸ್ಯರ ಹೆಸರು** : ಶ್ರೀ ಸಿ.ಟಿ. ರವಿ
(ವಿಧಾನಸಭೆಯಿಂದ ಚುನಾಯಿತರಾದವರು)

**ಉತ್ತರಿಸುವ ದಿನಾಂಕ** : 11.08.2025

**ಉತ್ತರಿಸುವವರು** : ಅರಣ್ಯ ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಹುಲಿಗಳ ಸರಣಿ ಸಾವು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ 5 ವರ್ಷದಿಂದ ರಾಜ್ಯದಲ್ಲಿ ಎಷ್ಟು ಹುಲಿಗಳು ಮೃತಪಟ್ಟಿವೆ; (ವಲಯವಾರು ವಿವರ ನೀಡುವುದು) | ಕಳೆದ 05 ವರ್ಷಗಳಲ್ಲಿ ರಾಜ್ಯದಲ್ಲಿ ಮೃತಪಟ್ಟಿರುವ ಹುಲಿಗಳ ವಿವರ (ವಲಯವಾರು) **ಅನುಬಂಧ-01ರಲ್ಲಿ** ಒದಗಿಸಲಾಗಿದೆ. |
| (ಆ) | ಹುಲಿಗಳ ಸಾವಿಗೆ ಕಾರಣಗಳೇನು; ಮಾನವರಿಂದ ಹತರಾದ ಹುಲಿಗಳೆಷ್ಟು; (ಪ್ರಕರಣವಾರು ವಿವರ ಒದಗಿಸುವುದು); | ಹುಲಿಗಳು ಈ ಕೆಳಕಂಡ ಕಾರಣಗಳಿಂದಾಗಿ ಸಾವನ್ನಪ್ಪಿರುತ್ತವೆ.<br>1. ಸ್ವಾಭಾವಿಕ<br>• ಆಂತರಿಕ ಕಾದಾಟ<br>• ಅನಾರೋಗ್ಯ<br>• ವಯೋಸಹಜ<br><br>2. ಅಸ್ವಾಭಾವಿಕ<br>• ಗುಂಡೇಟು<br>• ಉರುಳಿಗೆ ಸಿಲುಕಿ<br>• ವಿಷಪ್ರಾಶಣ<br>• ವಿದ್ಯುತ್ ಆಘಾತ<br>ಕಳೆದ 05 ವರ್ಷಗಳಲ್ಲಿ 13 ಹುಲಿಗಳು ಅಸ್ವಾಭಾವಿಕವಾಗಿ ಮೃತಪಟ್ಟಿವೆ ವಿವರ **ಅನುಬಂಧ-02ರಲ್ಲಿ** ಒದಗಿಸಿದೆ. |
| ಇ) | ಹುಲಿಗಳ ಸಾವಿಗೆ ಕಾರಣಕರ್ತರಾದವರ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ;(ಪ್ರಕರಣವಾರು ವಿವರ ನೀಡುವುದು); | ಹುಲಿಗಳ ಸಾವಿಗೆ ಕಾರಣಕರ್ತರಾದವರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರನ್ವಯ ವನ್ಯಜೀವಿ ಅಪರಾಧ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು. ರಾಜ್ಯದಲ್ಲಿ ಕಳೆದ 05 ವರ್ಷಗಳಲ್ಲಿ ದಾಖಲಾದ ಪ್ರಕರಣಗಳ ವಿವರವನ್ನು **ಅನುಬಂಧ-02ರಲ್ಲಿ** ಒದಗಿಸಲಾಗಿದೆ. |
| ಈ) | ಹುಲಿಗಳ ಸಾವಿನ ಹಿನ್ನಲೆಯಲ್ಲಿ ಎಷ್ಟು ಸರ್ಕಾರಿ ಸಿಬ್ಬಂದಿಗಳ ವಿರುದ್ಧ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ; ಕಾಡಿನಂಚಿನ ಗ್ರಾಮಗಳಲ್ಲಿ ಹುಲಿಗಳಿಂದ ಮಾನವರಿಗೆ ಆಗುವ ಆಪಾಯವನ್ನು ತಪ್ಪಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು; | ಮಲೈಮಹದೇಶ್ವರ ವನ್ಯಜೀವಿ ವಿಭಾದಲ್ಲಿ 05 ಹುಲಿಗಳ ಅಸಹಜ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿರುತ್ತದೆ.<br><br>**ಕಾಡಂಚಿನ ಗ್ರಾಮಗಳಲ್ಲಿ ಹುಲಿಗಳಿಂದ ಮಾನವರಿಗೆ ಆಗುವ ಅಪಾಯವನ್ನು ತಪ್ಪಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.** |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| | | • ಹುಲಿ ಹಾವಳಿ ಹೆಚ್ಚಾಗಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಬೋನುಗಳನ್ನು ಇರಿಸಿ ಸೆರೆ ಹಿಡಿದು ಸೂಕ್ತ ಆವಾಸಸ್ಥಾನಕ್ಕೆ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ.<br>• ರೇಡಿಯೋ ಕಾಲರ್ ಅಳವಡಿಸಿರುವ ಹುಲಿಗಳ ಚಲನ ವಲನಗಳನ್ನು ದಿನನಿತ್ಯ ಗಮನಿಸಲು ಇಲಾಖಾವತಿಯಿಂದ "ಹೆಜ್ಜೆ" ಎಂಬ ಡ್ಯಾಶ್ ಬೋರ್ಡ್‌ನ್ನು ತಯಾರಿಸಲಾಗಿದೆ.<br>• ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br>• ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದು ಸಸ್ಯಹಾರಿಗಳ ಸಂರಕ್ಷಣೆಗೆ ಕಾರಣವಾಗುತ್ತದೆ ಮತ್ತು ಹುಲಿಗಳಿಗೆ ಆಹಾರ ಲಭ್ಯತೆಯನ್ನು ಖಚಿತಪಡಿಸುತ್ತದೆ.<br>• ಹುಲಿಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.<br>• ಕಾಡಂಚಿನ ಗ್ರಾಮಗಳಲ್ಲಿ ಹುಲಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ಮಾಹಿತಿ ನೀಡಲು Advance alert system ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.<br>• ಹುಲಿಗಳು ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ / ಮಾಹಿತಿ ನೀಡಲಾಗುತ್ತಿದೆ.<br>• ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ "**AI**" Based Camera ಗಳನ್ನು ಅಳವಡಿಸಲಾಗಿದ್ದು, ಹುಲಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br>• ಡ್ರೋನ್‌ಗಳ ಮುಖಾಂತರ ಹುಲಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ. |

**ಸಂಖ್ಯೆ: ಅಪಜೀ 168 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

## ಅನುಬಂಧ-01

### ರಾಜ್ಯದಲ್ಲಿ ಕಳೆದ 05 ವರ್ಷಗಳಲ್ಲಿ ಮೃತಪಟ್ಟಿರುವ ಹುಲಿಗಳ ಸಂಖ್ಯೆ(ವಲಯವಾರು)

| ವಿಭಾಗ | ವಲಯ | 2020-21 | 2021-22 | 2022-23 | 2023-24 | 2024-25 | 2025-26 | ಒಟ್ಟು |
|---|---|---|---|---|---|---|---|---|
| ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ | ಬಂಡೀಪುರ | - | 1 | - | - | - | - | 1 |
| | ಗುಂಡ್ರೆ | - | 4 | - | 1 | - | 1 | 6 |
| | ಹೆಡಿಯಾಳ | - | - | 1 | - | 1 | - | 2 |
| | ಕುಂದುಕೆರೆ | - | 1 | 1 | - | - | - | 2 |
| | ಮದ್ದೂರು | - | 1 | - | 2 | - | - | 3 |
| | ಮೊಳೆಯೂರು | - | - | - | 1 | - | - | 1 |
| | ಮೂಲೆಹೊಳೆ | - | 1 | - | - | - | - | 1 |
| | ಎನ್. ಬೇಗೂರು | 1 | - | - | - | 1 | - | 2 |
| | ನುಗು | 1 | 1 | - | - | - | - | 2 |
| | ಓಂಕಾರ್ | - | - | 1 | - | - | 1 | 2 |
| ಭದ್ರಾ ಹುಲಿ ಸಂರಕ್ಷಿತ ಪ್ರದೇಶ | ಹೆಬ್ಬೆ | 1 | - | - | - | - | - | 1 |
| | ತಣಿಗೆಬೈಲು | - | 1 | - | - | - | - | 1 |
| ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ | ಬೈಲೂರು | - | - | - | 1 | - | - | 1 |
| | ಚಾಮರಾಜನಗರ | - | - | - | 2 | - | - | 2 |
| | ಕೆ. ಗುಡಿ | 1 | 1 | - | - | - | - | 2 |
| | ಕೊಳ್ಳೇಗಾಲ ವನ್ಯಜೀವಿ | 1 | - | 1 | - | 1 | - | 3 |
| ಹಳಿಯಾಳ | ಬರ್ಚಿ | - | - | 1 | - | - | - | 1 |
| ಹಾಸನ | ಬೇಲೂರು | - | - | - | - | 1 | - | 1 |
| ಮಡಿಕೇರಿ ಪ್ರಾದೇಶಿಕ | ಭಾಗಮಂಡಲ | 1 | - | - | - | - | - | 1 |
| | ಕುಶಾಲನಗರ | - | - | - | 1 | - | - | 1 |
| ಮಡಿಕೇರಿ ವನ್ಯಜೀವಿ | ಶ್ರೀಮಂಗಲ | - | - | 1 | - | - | - | 1 |
| ಎಂ. ಎಂ. ಹಿಲ್ಸ್ ವನ್ಯಜೀವಿ | ಹೂಗ್ಯಂ | - | - | - | - | - | 5 | 5 |
| ಮೈಸೂರು ಪ್ರಾದೇಶಿಕ | ಮೈಸೂರು ಪ್ರಾದೇಶಿಕ | - | - | - | 1 | - | - | 1 |
| | ಎಚ್. ಡಿ. ಕೋಟೆ | - | - | - | - | 1 | - | 1 |
| ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ | ಆನೆಚೌಕೂರು | - | 3 | 1 | 1 | 1 | - | 6 |
| | ಅಂತರಸಂತೆ | - | - | 2 | - | - | - | 2 |
| | ಡಿ. ಬಿ. ಕುಪ್ಪೆ | - | 3 | 1 | 1 | 1 | - | 6 |
| | ಹುಣಸೂರು ವನ್ಯಜೀವಿ | - | 1 | - | - | 1 | 1 | 3 |
| | ಕಲ್ಲಹಳ್ಳ | 1 | - | - | - | - | - | 1 |
| | ಮೇಟಿಕುಪ್ಪೆ | - | - | 1 | - | 1 | - | 2 |
| | ನಾಗರಹೊಳೆ | 1 | - | 1 | - | - | - | 2 |
| | ವೀರನಹೊಸಳ್ಳಿ | 1 | 1 | 2 | - | - | - | 4 |
| ಸಾಗರ | ಅಂಬ್ಲಿಗೋಳ | - | - | - | - | 1 | - | 1 |
| ತುಮಕೂರು | ಗುಬ್ಬಿ | - | - | 1 | - | - | - | 1 |
| ವಿರಾಜಪೇಟೆ | ಪೊನ್ನಂಪೇಟೆ | 1 | - | 1 | 1 | - | - | 3 |
| ಒಟ್ಟು | | 10 | 19 | 16 | 12 | 10 | 8 | 75 |

ಪ್ರಧಾನಮುಖ್ಯಅರಣ್ಯಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತುಮುಖ್ಯವನ್ಯಜೀವಿಪರಿಪಾಲಕರು
ಕರ್ನಾಟಕ, ಬೆಂಗಳೂರು

## ಅನುಬಂಧ-02

### ರಾಜ್ಯದಲ್ಲಿ ಕಳೆದ 05 ವರ್ಷಗಳಲ್ಲಿ ಹುಲಿಗಳ ಸಾವಿನ ಪ್ರಕರಣಗಳಲ್ಲಿ ಕಾರಣಕರ್ತರಾದ ರವರ ವಿರುದ್ಧ ಕೈಗೊಂಡಿರುವ ಕ್ರಮದ ವಿವರ

| ಕ್ರ. ಸಂ | ವಿಭಾಗ | ವಲಯ | ವರ್ಷ | ಮೃತಪಟ್ಟ ದಿನಾಂಕ | ಲಿಂಗ | ವಯಸ್ಸು | ಸಾವಿಗೆ ಕಾರಣ | ಕೈಗೊಂಡ ಕ್ರಮ | ಬಂಧಿತ ಅಪರಾಧಿಗಳ ವಿವರ | ಎಫ್‌ಐಆರ್ ಸಂಖ್ಯೆ/ಪ್ರಕರಣ ಸಂ | ವಿಚಾರಣಾ ವರದಿಯ ಸ್ಥಿತಿ (ಸಲ್ಲಿಸಲಾಗಿದೆ/ಇಲ್ಲ) | ಚಾರ್ಜ್ ಶೀಟ್ ಸಲ್ಲಿಸಲಾಗಿದೆ / ಇಲ್ಲ. | ಚಾರ್ಜ್ ಶೀಟ್ ಸಲ್ಲಿಸಲಾಗಿದೆ / ಇಲ್ಲ. | ವಿಚಾರಣೆಯ ಸ್ಥಿತಿ | ಷರಾ |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1 | ಬಂಡೀಪುರ ಹು.ಯೋ | ಗುಂಡ್ರೆ | 2021-22 | 14-09-2021 | ಗಂಡು | 5-6 ವರ್ಷ | ಉರುಳಿಗೆ ಸಿಲುಕಿ ಸಾವನ್ನಪ್ಪಿದೆ. | ವನ್ಯಜೀವಿ ಅಪರಾಧ ಪ್ರಕರಣ ದಾಖಲಿಸಲಾಗಿದೆ. | 1 | 2/21-22 | ಸಲ್ಲಿಸಲಾಗಿದೆ | ಜೆಎಂಎಫ್‌ಸಿ ನ್ಯಾಯಾಲಯ - ಹೆಗ್ಗಡದೇವನ ಕೋಟೆ ಇಲ್ಲಿ ಸಲ್ಲಿಸಲಾಗಿದೆ. | 2686/23 | ವಿಚಾರಣಾ ಹಂತದಲ್ಲಿರುತ್ತದೆ. | ಜೆಎಂಎಫ್‌ಸಿ ನ್ಯಾಯಾಲಯ |
| 2 | ಬಂಡೀಪುರ ಹು.ಯೋ | ಕುಂದುಕೆರೆ | 2022-23 | 07-02-2023 | ಗಂಡು | 4-5 ವರ್ಷ | ವಿದ್ಯುತ್ ಸ್ಪರ್ಶ | ವನ್ಯಜೀವಿ ಅಪರಾಧ ಪ್ರಕರಣ ದಾಖಲಿಸಲಾಗಿದೆ. | 1 | 10/23-24 | ಸಲ್ಲಿಸಲಾಗಿದೆ | ಜೆಎಂಎಫ್‌ಸಿ ನ್ಯಾಯಾಲಯ - ಗುಂಡ್ಲುಪೇಟೆ ಇಲ್ಲಿ ಸಲ್ಲಿಸಲಾಗಿದೆ. | 70/23 | ವಿಚಾರಣಾ ಹಂತದಲ್ಲಿರುತ್ತದೆ. | ಜೆಎಂಎಫ್‌ಸಿ ನ್ಯಾಯಾಲಯ |
| 3 | ನಾಗರಹೊಳೆ | ಕಲ್ಲಹಳ್ಳ | 2020-21 | 25-08-2020 | ಗಂಡು | 6-7 ವರ್ಷ | ಗುಂಡೇಟು | ವನ್ಯಜೀವಿ ಅಪರಾಧ ಪ್ರಕರಣ ದಾಖಲಿಸಲಾಗಿದೆ. | 5 | 03/2020-21 | ಸಲ್ಲಿಸಲಾಗಿದೆ | ಸಲ್ಲಿಸಲಾಗಿದೆ | 898/2020 | ವಿಚಾರಣಾ ಹಂತದಲ್ಲಿರುತ್ತದೆ. | ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ |
| 4 | ನಾಗರಹೊಳೆ | ಆನೆ ಚೌಕೂರು | 2021-22 | 14-02-2022 | ಗಂಡು | 7-8 ವರ್ಷ | ಕಳ್ಳ ಬೇಟೆ | ವನ್ಯಜೀವಿ ಅಪರಾಧ ಪ್ರಕರಣ ದಾಖಲಿಸಲಾಗಿದೆ. | - | 06/2021-22 | ಹೌದು | ಹೌದು | 1074/2024 | ಸಮನ್ಸ್ | ಮುಂದಿನ ವಿಚಾರಣೆ ದಿನಾಂಕ:: 25-10-2024 |
| 5 | ನಾಗರಹೊಳೆ | ವೀರನ ಹೊಸಹಳ್ಳಿ | 2022-23 | 10-04-2022 | - | - | ವಿಷ ಸೇವನೆಯಿಂದ | ವನ್ಯಜೀವಿ ಅಪರಾಧ ಪ್ರಕರಣ ದಾಖಲಿಸಲಾಗಿದೆ. | - | 01/2022-23 | ಇಲ್ಲ. | ಇಲ್ಲ. | - | - | ವಿಚಾರಣೆಯ ಹಂತದಲ್ಲಿದೆ. |
| 6 | ನಾಗರಹೊಳೆ | ಅಂತರಸಂತೆ ವನ್ಯಜೀವಿ | 2022-23 | 12-11-2022 | ಹೆಣ್ಣು | 12-13 ವರ್ಷ | ಉರುಳಿಗೆ ಸಿಲುಕಿ ಸಾವನ್ನಪ್ಪಿದೆ. | ವನ್ಯಜೀವಿ ಅಪರಾಧ ಪ್ರಕರಣ ದಾಖಲಿಸಲಾಗಿದೆ. | - | 04/2022-23 | ಅನ್ವಯಿಸುವುದಿಲ್ಲ. | ಅನ್ವಯಿಸುವುದಿಲ್ಲ. | NA | ಅನ್ವಯಿಸುವುದಿಲ್ಲ. | ಹೆಚ್ ಡಿ ಕೋಟೆ ಪ್ರಾದೇಶಿಕ ವ್ಯಾಪ್ತಿಗೆ ಪ್ರಕರಣ ಹಸ್ತಾಂತರ |
| 7 | ಹಳಿಯಾಳ | ಬರ್ಚಿ | 2022-23 | 18-12-2022 | ಗಂಡು | 4 5ವರ್ಷ | ಆಂತರಿಕ ಕಾಳಗ (ಅಂಗಾಗ ಕಳುವಿನ ಪ್ರಕರಣ) | ವನ್ಯಜೀವಿ ಅಪರಾಧ ಪ್ರಕರಣ ದಾಖಲಿಸಲಾಗಿದೆ. | 1 ಸಂಖ್ಯೆ | 01/2022-23 18 12-2022 | ಸಲ್ಲಿಸಲಾಗಿದೆ | ಸಲ್ಲಿಸಲಾಗಿದೆ | 424/2025 | ಆರೋಪಿಗಳಿಗೆ ವಿಚಾರಣೆಗೆ ಸಮನ್ಸ್ ಜಾರಿ ಮಾಡಲಾಗಿದೆ | |
| 8 | ಮೈಸೂರು (ಪ್ರಾ) | ಮೈಸೂರು (ಪ್ರಾ) | 2023-24 | 29-01-2024 | ಗಂಡು | 1-2 ವರ್ಷ | ರಸ್ತೆ ಅಪಘಾತ | ವನ್ಯಜೀವಿ ಅಪರಾಧ ಪ್ರಕರಣ ದಾಖಲಿಸಲಾಗಿದೆ. | ಆರೋಪಿ ಪರಾರಿಯಾಗಿದ್ದಾನೆ | 44/2023-24 | ಇಲ್ಲ. | - | - | ವಿಚಾರಣೆಯ ಹಂತದಲ್ಲಿದೆ. | II JMFC ನ್ಯಾಯಾಲಯ |
| 9 | ಎಂ.ಎಂ.ಹಿಲ್ಸ್ | ಹೂಗ್ಯಂ | 2025-26 | 26-06-2025 | ಹೆಣ್ಣು | ವಯಸ್ಕ | ವಿಷ ಸೇವನೆಯಿಂದ | ವನ್ಯಜೀವಿ ಅಪರಾಧ ಪ್ರಕರಣ ದಾಖಲಿಸಲಾಗಿದೆ. | 04 ಸಂಖ್ಯೆ | 02/2025 26 | ಸಲ್ಲಿಸಲಾಗಿದೆ | ಇಲ್ಲ. | | | FSL ನಿಂದ ವರದಿ ಸ್ವೀಕೃತವಾದ ನಂತರ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಲಾಗುವುದು. |
| 10 | ಎಂ.ಎಂ.ಹಿಲ್ಸ್ | ಹೂಗ್ಯಂ | 2025-26 | 26-06-2025 | ಹೆಣ್ಣು | ಮರಿ | ವಿಷ ಸೇವನೆಯಿಂದ | | | | | | | | |
| 11 | ಎಂ.ಎಂ.ಹಿಲ್ಸ್ | ಹೂಗ್ಯಂ | 2025-26 | 26-06-2025 | ಹೆಣ್ಣು | ಮರಿ | ವಿಷ ಸೇವನೆಯಿಂದ | | | | | | | | |
| 12 | ಎಂ.ಎಂ.ಹಿಲ್ಸ್ | ಹೂಗ್ಯಂ | 2025-26 | 26-06-2025 | ಹೆಣ್ಣು | ಮರಿ | ವಿಷ ಸೇವನೆಯಿಂದ | | | | | | | | |
| 13 | ಎಂ.ಎಂ.ಹಿಲ್ಸ್ | ಹೂಗ್ಯಂ | 2025-26 | 26-06-2025 | ಗಂಡು | ಮರಿ | ವಿಷ ಸೇವನೆಯಿಂದ | | | | | | | | |

ಪ್ರಧಾನಮುಖ್ಯಅರಣ್ಯಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತುಮುಖ್ಯವನ್ಯಜೀವಿಪರಿಪಾಲಕರು
ಕರ್ನಾಟಕ, ಬೆಂಗಳೂರು